ದಿನಾಂಕಃ **15-09-2021.**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಬಿ ವಕೀಲರಿಂದಃ</u>

ನನ್ನ ತಂದೆಯ ಹೆಸರು ಮದ್ದಣ್ಣ . ಈ ದಾವೆಯನ್ನು ನಿವೇಶನ ಸಂಖ್ಯೆ 1 ಖಾತೆ ಸಂಖ್ಯೆ 87 ಕ್ಕಾಗಿ ಹೂಡಿದ್ದೇನೆ. ಈ ನಿವೇಶನ ಹುಯಿಲ್ ದೊರೆ ಗ್ರಾಮ ಪಂಚಾಯ್ತಿ ಗೆ ಬರುತ್ತದೆ. ಸದರಿ ನಿವೇಶನದ ಚಕ್ಕುಬಂದಿ ದಕ್ಷಿಣಕ್ಕೆ ಃ ರಸ್ತೆ , ಪೂರ್ವಕ್ಕೆ ಃ ಗಲ್ಲಿ , ಉತ್ತರಕ್ಕೆಃ ದಾರಿ , ಪಶ್ಚಿಮಕ್ಕೆ ಃ ದಾರಿ ಇದೆ . ಈ ದಾವಾ ಸ್ವತ್ತು ನನಗೆ ಹೇಗೆ ಬಂದಿತು ಎಂದರೆ ಸರ್ಕಾರಿ ಜಾಗದಲ್ಲಿ ನಾನು ಗುಡಿಸಲು ಹಾಕಿಕೊಂಡು ಇದ್ದೆ ಎನ್ನುತ್ತಾರೆ. ನನ್ನ ಸ್ವಂತ ಊರು ಅಣೆಹಳ್ಳಿ, ಗುಬ್ಬಿ ತಾಲ್ಲೂಕು. ನಿವೇಶನ ಸಂಖ್ಯೆ 1 , ಖಾತೆ ನಂಃ 87 ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸದರಿ ನಿವೇಶನದಲ್ಲಿ ಗುಡಿಸಲು ಕಟ್ಟಿಕೊಂಡು ಯಾವತ್ತಿಗೂ ವಾಸವಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಹಕ್ಕು ಪತ್ರದಲ್ಲಿ ಹಾಲೇಗೌಡ ಮಾವ ನಿಂಗಪ್ಪ ಎಂದು ಬರೆದಿದೆ ಎಂದರೆ ಸರಿ. ನಿಂಗಪ್ಪ ಬಿನ್ ಮದ್ದಣ್ಣ ಎಂದು ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಾಲೇಗೌಡ ನನಗೆ ಮಾವನಾಗಬೇಕು ಎನ್ನುತ್ತಾರೆ . ನಾವು ಹಕ್ಕು ಪತ್ರ ವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಿಪಿ-2 ಮತ್ತು ನಿಪಿ- 3 , ನಿಪಿ- 4 ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಿಪಿ-3 ರ ಪ್ರಕಾರ ನಿಂಗಣ್ಣ ತಂದೆ ಹಾಲೇಗೌಡ ಎಂದರೆ ನಾನಲ್ಲ ಎಂದರೆ ಸರಿ. ಸಾಕ್ಷಿ ಹಾಲೇಗೌಡ ನನ್ನ ಮಾವ ಎನ್ನುತ್ತಾರೆ . ಪುಟ್ಟಮ್ಮನ ಗಂಡನ ಹೆಸರು ಕಾಮೇಗೌಡ ಎಂದರೆ ಸರಿ. ಅವರಿಗೆ ಕಾಮಣ್ಣ ಎನ್ನುತ್ತಾರೆ ಎಂದರೆ ಸರಿ. ಅವರಿಗೆ ಇಬ್ಬರು ಮಕ್ಕಳು ಎಂದರೆ ಸರಿ.

ಪೂರ್ವಕ್ಕೆ ಃ ಖಾಲಿ ನಿವೇಶನ ಸಂಖ್ಯೆ 8 , ಪಶ್ಚಿಮಕ್ಕೆ ಃ ರಸ್ತೆ , ಉತ್ತರಕ್ಕೆ ಃ ಕದುರಪ್ಪನ ಮನೆ , ದಕ್ಷಿಣಕ್ಕೆ ಃ ಪುಟ್ಟಮ್ಮನ ಮನೆ , ಮಧ್ಯದಲ್ಲಿ ಇರುವ ಸ್ವತ್ತಿಗೆ ನನಗೆ ಹಕ್ಕು ಇಲ್ಲ ಎಂದರೆ ಸಾಕ್ಷಿ ನನ್ನ ಸ್ವತ್ತಿನ ಅಕ್ಕ-ಪಕ್ಕ ದಲ್ಲಿ ಪುಟ್ಟಮ್ಮನ ಜಮೀನು ಇಲ್ಲ ಎನ್ನುತ್ತಾರೆ. ಈ ಚಕ್ಕುಬಂದಿಯ ಮಧ್ಯದಲ್ಲಿರುವ ಸ್ವತ್ತನ್ನು ಪುಟ್ಟಮ್ಮ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪುಟ್ಟಮ್ಮನವರ ನಿವೇಶನದ ದಕ್ಷಿಣಕ್ಕೆ ಪುಟ್ಟಣ್ಣ ನವರ ಜಮೀನು ಇದೆ ಎಂದರೆ ಸರಿ. ಸಾಕ್ಷಿ ದಾರಿಯಿಂದ ಆಚೆಗೆ ಇದೆ ಎನ್ನುತ್ತಾರೆ . ಪುಟ್ಟಮ್ಮನ ನಿವೇಶನವನ್ನು ಹುಯಿಲ್ ದೊರೆ ಗ್ರಾಮದ ಚಿಕ್ಕಣ್ಣ ನ ಮಗ ರಾಮಣ್ಣನಿಂದ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿಸಿದಾಗಿನಿಂದಲೂ ಅವರೇ ಅನುಭವದಲ್ಲಿದ್ದಾರೆ ಎಂದರೆ ಸುಳ್ಳು. ಗ್ರಾಮ ಪಂಚಾಯ್ತಿಯಲ್ಲಿ ನಿವೇಶನದ ಎಲ್ಲಾ ದಾಖಲೆಗಳು ಪುಟ್ಟಮ್ಮನ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ಪೂರ್ವಕ್ಕೆ ಃ ಖಾಲಿ ನಿವೇಶನ , ಪಶ್ಚಿಮಕ್ಕೆ ಃ ರಸ್ತೆ ,ಉತ್ತರಕ್ಕೆಃ ಕದುರಪ್ಪನವರ ಜಮೀನು , ದಕ್ಷಿಣಕ್ಕೆ ಃ ಪುಟ್ಟಣ್ಣನವರ ಹಿಡುವಳಿ ಜಮೀನು ಮಧ್ಯ ಇರುವ ನಿವೇಶನಕ್ಕೆ ಆದೇಶವಾಗಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಸದರಿ ಸ್ವತ್ತಿನಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರದವರು ನೀಡಿದ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನೆ ಎನ್ನುತ್ತಾರೆ. ಸರ್ಕಾರದವರು ನನಗೆ ನಿವೇಶನ ಸಂಖ್ಯೆ 1 ರ ಹಕ್ಕು ಪತ್ರ ನೀಡಿಲ್ಲ , ನಾನು ಅದರ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪುಟ್ಟಮ್ಮನವರ ನಿವೇಶನದಲ್ಲಿ ಅವರು ಕಲ್ಲು ಮತ್ತು ಮರಳು ಸಂಗ್ರಹಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿಯ ನಿವೇಶನಗಳು ಅಲ್ಲಿ ಇಲ್ಲ ಎನ್ನುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆರೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.